

ಧೂಳು ಮತ್ತು ಇತರೆ ವಸ್ತುಗಳು ಗೂಡಿನಿಂದ ಬೇರ್ಪಡುತ್ತದೆ. ಶುದ್ಧೀಕರಿಸುವ ತಟ್ಟೆಯಿಂದ ಗೂಡುಗಳು ಗೂಡು ಸಂಗ್ರಹಿಸುವ ತಟ್ಟೆಗೆ ಬಂದು ಬೀಳುತ್ತದೆ. ಗೂಡು ಬಿಡಿಸಿದ ಚಂದ್ರಿಕೆಗಳು ಯಂತ್ರದ ಇನ್ನೊಂದು ಭಾಗದಿಂದ ಹೊರಗೆ ಬರುತ್ತದೆ. ಯಾತ್ರದ ಮೂಲಕ ಗೂಡು ಬಿಡಿಸುವಾಗ ಚಂದ್ರಿಕೆಗಳಿಗೆ ಮತ್ತು ಗೂಡುಗಳಿಗೆ ಯಾವ ರೀತಿಯ ಹಾನಿಯೂ ಆಗುವುದಿಲ್ಲ.

## ಗೂಡು ಬಿಡಿಸುವ ಸಾಮರ್ಥ್ಯ ಹಾಗೂ ನಿರ್ವಹಣಾ ವೆಚ್ಚ

ಈ ಯಂತ್ರದಿಂದ ಪ್ರತಿ ಘಂಟೆಗೆ ಸುಮಾರು 150 ರಿಂದ 170 ಪ್ಲಾಸ್ಟಿಕ್ ಚಂದ್ರಿಕೆಗಳಿಂದ (ಅಂದರೆ 100 ಮೊಟ್ಟೆಗಳು) ಗೂಡನ್ನು ಬಿಡಿಸಬಹುದು ಹಾಗೂ ಒಂದು ದಿವಸಕ್ಕೆ 450-600 ಕೆ.ಜಿ ಗೂಡನ್ನು ಬಿಡಿಸಬಹುದು. ಈ ಯಂತ್ರವನ್ನು ಬಳಸಲು ಮೂರು ಕಾರ್ಮಿಕರು ಬೇಕಾಗುತ್ತಾರೆ. ಮೊದಲನೆಯವರು ಚಂದ್ರಿಕೆಯನ್ನು ಸರಳುಗಳ ಮಧ್ಯೆ ತೂರಿಸುವುದಕ್ಕೆ, ಎರಡನೆಯವರು ಚಂದ್ರಿಕೆಯನ್ನು ಮುಂದಕ್ಕೆ ತಳ್ಳುತ್ತಾ ಕೈಚಾಲಿತ ಯಂತ್ರವನ್ನು ತಿರುಗಿಸಲು (ಯಂತ್ರದ ಕಾರ್ಯ ನಡೆಸಲು) ಹಾಗೂ ಮೂರನೆಯವರು ಗೂಡು ಬಿಡಿಸಿದ ಚಂದ್ರಿಕೆಯನ್ನು ಸಂಗ್ರಹಿಸಿಕೊಳ್ಳಲು. ಯಂತ್ರದಿಂದ ಗೂಡು ಬಿಡಿಸಿದರೆ ಒಂದು ಕೆ.ಜಿ ಗೂಡಿಗೆ 2/- ರೂ., ಕೈಯಿಂದ ಬಿಡಿಸಿದರೆ ಒಂದು ಕೆ.ಜಿ ಗೂಡಿಗೆ 10-12 ರೂ.ಗಳು ಖರ್ಚಾಗುತ್ತದೆ.

ಪ್ಲಾಸ್ಟಿಕ್ ಚಂದ್ರಿಕೆಯಿಂದ ಗೂಡು ಬಿಡಿಸುವ ಯಂತ್ರವನ್ನು ಇದೆ ಮೊದಲ ಬಾರಿಗೆ ರಚಿಸಿ ಅಭಿವೃದ್ಧಿ ಪಡಿಸಲಾಗಿದೆ. ಪ್ಲಾಸ್ಟಿಕ್ ಚಂದ್ರಿಕೆಯಿಂದ ಸ್ವಂತವಾಗಿ ಗೂಡುಗಳನ್ನು ಬಿಡಿಸುವುದಕ್ಕೆ ಮತ್ತು ಖರ್ಚನ್ನು ಕಡಿಮೆ ಮಾಡಲು ಈ ಯಂತ್ರವು ರೈತರಿಗೆ ಬಹಳ ಉಪಯುಕ್ತವಾಗಿದೆ. ಅಲ್ಲದೆ ಈ ಯಂತ್ರದಿಂದ ಗೂಡು ಬಿಡಿಸುವ ಕಾರ್ಮಿಕರ ಶ್ರಮ ಸಹ ಕಡಿಮೆಯಾಗುತ್ತದೆ.

**ಈ ಯಂತ್ರವನ್ನು ಕೆಳಕಂಡ ಸಂಸ್ಥೆಗಳು ತಯಾರಿಸಿ ಮಾರಾಟ ಮಾಡುತ್ತವೆ.**

1. **ಮೆ/ ರಾಜ್ ಎಂಟರ್ ಪ್ರೈಸಸ್**
   # 1265, ಆಶೀರ್ವಾದ, ಹೆಬ್ಬಾಳ ಒಂದನೇ ಹಂತ
   ಮೈಸೂರು 570 016, ಕರ್ನಾಟಕ
   ದೂರವಾಣಿ : 0821-2582656 / 4280190
   ಮೊಬೈಲ್ : 9986406278

2. **ಮೆ/ ಎಸ್ ಕೆ ಬಿ ಸಿಸ್ಟಂಸ್**
   ಎಸ್.ಎಫ್–230, ಕಾಮರಾಜರ್ ರಸ್ತೆ
   ಜನತಾ ನಗರ ಪಶ್ಚಿಮ, ಸರವಣಂಪಟ್ಟಿ ಪೋಸ್ಟ್
   ಕೊಯಮತ್ತೂರು 641035, ತಮಿಳುನಾಡು
   ದೂರವಾಣಿ : 0422-2668299
   ಮೊಬೈಲ್ : 9842203545

**ಪಠ್ಯ:**
ಸತೀಶ್ ವರ್ಮ, ಜಿ.ಎಸ್. ವಿಂಧ್ಯಾ & ಎಂ.ಟಿ.ಹಿಮಂತರಾಜ್

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ

**ನಿರ್ದೇಶಕರು**
ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ
(ISO 9001 : 2008 ದಿಂದ ದೃಢೀಕೃತಗೊಂಡಿದೆ)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಮಂತ್ರಾಲಯ, ಭಾರತ ಸರ್ಕಾರ, ಶ್ರೀರಾಂಪುರ, ಮೈಸೂರು 570 008
ದೂರವಾಣಿ: 0821–2362845, 2362406
ಫ್ಯಾಕ್ಸ್: 0821–2362845
ವೆಬ್: www.csrtimys.res.in
ಇ–ಮೇಲ್: csrtimys.csb@nic.in

ಪ್ರತಿಗಳು : 1500 ಜನವರಿ 2015 Design & Layout: J. Justin Kumar

Technical Bulletin No.40 [Kan]

# ಪ್ಲಾಸ್ಟಿಕ್ ಚಂದ್ರಿಕೆಯಿಂದ ಗೂಡುಗಳನ್ನು ಬಿಡಿಸುವ ಯಂತ್ರ



**ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ**
(ISO 9001 : 2008 ದಿಂದ ದೃಢೀಕೃತಗೊಂಡಿದೆ)
ಕೇಂದ್ರ ರೇಷ್ಮೆ ಮಂಡಳಿ, ವಸ್ತ್ರ ಮಂತ್ರಾಲಯ,
ಭಾರತ ಸರ್ಕಾರ, ಶ್ರೀರಾಂಪುರ, ಮೈಸೂರು–570 008

ರೇಷ್ಮೆ ಗೂಡಿನ ಉತ್ಪಾದನೆಯಲ್ಲಿ ಮೊಟ್ಟೆಯಿಂದ ಹೊರಬಂದ ಮರಿಗಳು 21-22 ದಿವಸ ಹಿಪ್ಪುನೇರಳೆ ಸೊಪ್ಪನ್ನು ತಿಂದು ಹುಳುಗಳು ಹಣ್ಣಾಗುತ್ತವೆ. ಹಣ್ಣಾದ ಹುಳುಗಳನ್ನು, ಗೂಡು ಕಟ್ಟಲು ಚಂದ್ರಿಕೆಯ ಮೇಲೆ ಹಾಕಬೇಕು. ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿ ಹುಳುಗಳನ್ನು ಬಿಡಲು ಪ್ಲಾಸ್ಟಿಕ್ ಚಂದ್ರಿಕೆಗಳನ್ನು ಉಪಯೋಗಿಸುತ್ತಾರೆ.

ಪ್ಲಾಸ್ಟಿಕ್ ಚಂದ್ರಿಕೆಯಿಂದ ಗೂಡುಗಳನ್ನು ರೈತರು ಕೈಯಿಂದ ಬಿಡಿಸುತ್ತಾರೆ, ಇದು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಲ್ಲದೆ, ಶ್ರಮದಾಯಕವಾಗಿದೆ. ಅಲ್ಲದೆ, ಗೂಡನ್ನು ತೆಗೆಯುವಾಗ, ರೋಗಗ್ರಸ್ಥ ಹುಳುಗಳಿಂದ, ಕರಗಿದ ಗೂಡಿನಿಂದ ಕೆಟ್ಟ ವಾಸನೆಯು ಸಹ ಬರುತ್ತದೆ. ಸಾಮಾನ್ಯವಾಗಿ ಸ್ತ್ರೀಯರನ್ನು ಈ ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಪ್ರತಿ ಪ್ಲಾಸ್ಟಿಕ್ ಚಂದ್ರಿಕೆಯಿಂದ ಗೂಡುಗಳನ್ನು ಬಿಡಿಸಲು 3-5 ನಿಮಿಷ ಬೇಕಾಗುತ್ತದೆ ಹಾಗೂ 100 ಮೊಟ್ಟೆಯಿಂದ ಬಂದ ಗೂಡುಗಳನ್ನು ಬಿಡಿಸಲು



ಅಂದಾಜು 3-4 ಕಾರ್ಮಿಕ ದಿವಸಗಳು ಬೇಕಾಗುತ್ತವೆ. 200 ರಿಂದ 300 ಮೊಟ್ಟೆಗಳನ್ನು ಸಾಕಾಣಿಕೆ ಮಾಡುವ ರೈತರು ಗೂಡು ಬಿಡಿಸುವ ಕೆಲಸವನ್ನು ಕುಟುಂಬದವರ ಸಹಾಯದಿಂದ ಮಾಡುವ ಸಾಧ್ಯತೆ ಇದೆ ಮತ್ತು ಲಾಭದಾಯಕವೂ ಕೂಡ. ಅಧಿಕ ಹುಳು ಸಾಕಾಣಿಕೆ ಮಾಡುವವರಿಗೆ ಗೂಡುಗಳನ್ನು ಬಿಡಿಸಲು ಕುಟುಂಬದ ಕಾರ್ಮಿಕರ ಜೊತೆಗೆ ಅನೇಕ ಕಾರ್ಮಿಕರನ್ನು ನೇಮಿಸಿಕೊಳ್ಳ ಬೇಕಾಗುತ್ತದೆ. ಆದುದರಿಂದ ಪ್ಲಾಸ್ಟಿಕ್ ಚಂದ್ರಿಕೆಯಿಂದ ಗೂಡುಗಳನ್ನು ಬಿಡಿಸುವುದಕ್ಕಾಗಿಯೇ ಈ ಸಂಸ್ಥೆಯು ಗೂಡು ಬಿಡಿಸುವ ಸಾಧನವನ್ನು ಅಭಿವೃದ್ಧಿ ಪಡಿಸಿದೆ.

**ಗೂಡು ಬಿಡಿಸುವ ಯಂತ್ರದ ವಿವರಣೆ**

ಈ ಯಂತ್ರವು ಒರಟಾದ ಮೇಲ್ಮೈ ಹೊಂದಿದ ಸ್ಟೀಲ್‌ನ 2 ಸರಳುಗಳನ್ನು ಹೊಂದಿದ್ದು ಇವು 3000 ಆರ್.ಪಿ.ಎಂ. ವೇಗದಲ್ಲಿ ವಿರುದ್ಧ ದಿಕ್ಕಿನಲ್ಲಿ ತಿರುಗುತ್ತವೆ. ಪ್ಲಾಸ್ಟಿಕ್ ಚಂದ್ರಿಕೆಯು ಗೂಡಿನ ಸಹಿತ ಈ ಸರಳಿನ ಮಧ್ಯ ಹಾದು ಹೋಗುವಾಗ, ಗೂಡುಗಳು ಚಂದ್ರಿಕೆಯಿಂದ ಬೇರ್ಪಡುವುದು. ಗೂಡು ಬಿಡಿಸುವ ಈ ಸರಳಿಗೆ ಅರ್ಧ ಅಶ್ವಶಕ್ತಿಯುಳ್ಳ 220 ವೋಲ್ಟ್‌ನ 50 Hz ಕಾರ್ಯಶಕ್ತಿಯುಳ್ಳ ವಿದ್ಯುತ್ ಚಾಲಿತ ಮೋಟಾರ್‌ನ್ನು ಅಳವಡಿಸಲಾಗಿದೆ. ಗೂಡು ಬಿಡಿಸಿದ ಮೇಲೆ ಪ್ಲಾಸ್ಟಿಕ್ ಚಂದ್ರಿಕೆಯನ್ನು ಎಳೆದುಕೊಳ್ಳಲು ಒಂದು ಜೊತೆ ಮರದ ಉರುಳುಗಳು ಯಂತ್ರದ ಹಿಂಭಾಗದಲ್ಲಿ ಜೋಡಿಸಲಾಗಿದೆ. ಸರಳಿನ ಎರಡೂ ಪಕ್ಕದಲ್ಲಿ, ಬಿಡಿಸಿದ




ಗೂಡುಗಳು ಯಂತ್ರದ ಕೆಳಗೆ ಇಟ್ಟಿರುವ ಪ್ಲಾಸ್ಟಿಕ್ ತಟ್ಟೆಗೆ ಬೀಳಲು ಅನುಕೂಲವಾಗುವಂತೆ ಎರಡು ಪ್ರತ್ಯೇಕ ತಡೆ (ಗಾರ್ಡ್) ಗಳನ್ನು ಕಲ್ಪಿಸಲಾಗಿದೆ.

**ಗೂಡು ಬಿಡಿಸುವ ಯಂತ್ರದ ಕಾರ್ಯ**

ಪ್ಲಾಸ್ಟಿಕ್ ಚಂದ್ರಿಕೆಯ ಪಾರ್ಶ್ವ ಭಾಗವು ಚೂಪಾಗಿಯೂ ಹಾಗೂ ಅಸಮವಾಗಿಯೂ ಇರುತ್ತದೆ. ಆದುದರಿಂದ ಸುಲಭವಾಗಿ ಚಂದ್ರಿಕೆಯನ್ನು ಯಂತ್ರದ ಒಳಗೆ ಕಳುಹಿಸಲು, ಚಂದ್ರಿಕೆಯ ಒಂದು ತುದಿಯಲ್ಲಿ 50 mm ನ ಪಿ.ವಿ.ಸಿ ಯನ್ನು ಅಂಟಿಸಬೇಕು / ಜೋಡಿಸಬೇಕು.

ಪ್ಲಾಸ್ಟಿಕ್ ಚಂದ್ರಿಕೆಯಿಂದ ಗೂಡುಗಳನ್ನು ಸಡಿಲಿಸಲು, ಚಂದ್ರಿಕೆಯನ್ನು ಸ್ವಲ್ಪ ಹಿಗ್ಗಿಸಬೇಕು. ಚಂದ್ರಿಕೆಯಿಂದ ಸತ್ತ ಹುಳು, ಕಳಪೆ ಗೂಡು, ಒಣಗಿದ ಎಲೆ ಮುಂತಾದವುಗಳನ್ನು ತೆಗೆಯಬೇಕು. ಇಲ್ಲದೆ ಹೋದರೆ ಒಳ್ಳೆಯ ಗೂಡುಗಳು ಸಹ ಕಳಪೆಗೂಡುಗಳಾಗುತ್ತವೆ.

ಪ್ಲಾಸ್ಟಿಕ್ ಚಂದ್ರಿಕೆಯಿಂದ ಗೂಡುಗಳನ್ನು ಬಿಡಿಸಲು, ಚಂದ್ರಿಕೆಯನ್ನು ಎರಡು ಸರಳುಗಳ ನಡುವೆ ತೂರಿಸಬೇಕು. ಯಂತ್ರವನ್ನು ಚಾಲನೆ ಮಾಡಿದಾಗ ಎರಡು ಸರಳುಗಳು ವೇಗದಿಂದ ವಿರುದ್ಧ ಹಾಗೂ ಹೊರ ದಿಕ್ಕಿನಲ್ಲಿ ತಿರುಗಲು




ಪ್ರಾರಂಭಿಸಿ ಚಂದ್ರಿಕೆಯಿಂದ ಗೂಡನ್ನು ಗುಂಜುಸಹಿತ ಬೇರ್ಪಡಿಸುತ್ತದೆ. ಚಂದ್ರಿಕೆಯನ್ನು ಯಂತ್ರದಿಂದ ಬೇರ್ಪಡಿಸಲು ಕೈ ಚಾಲಿತ ಚಕ್ರವನ್ನು ಯಂತ್ರದ ಹಿಂಭಾಗಕ್ಕೆ ತಿರುಗಿಸಬೇಕು. ಬಿಡಿಸಿದ ಹಾಗೂ ಗುಂಜು ತೆಗೆದ ಗೂಡುಗಳು ಪಕ್ಕದ ತಡೆಯಿಂದ ಜಾರಿಕೊಂಡು ಯಂತ್ರದ ಕೆಳಗೆ ಇಟ್ಟಿರುವ ಶುದ್ಧೀಕರಿಸುವ ತಟ್ಟೆಯಲ್ಲಿ ಬಂದು ಬೀಳುತ್ತದೆ ಹಾಗೂ